# ಕರಾವಳಿಯ ಮಿನಿ ನಯಾಗರ
# ಕುಂಟಾಲಪಲ್ಕೆ ಫಾಲ್ಸ್

ಚಿತ್ರ–ಬರಹ:
**ಕಿರಣ್ ಇಜಿಮಾನ್**



ಅಮೆರಿಕ– ಕೆನಡಾದ ಜಗತ್ಪ್ರಸಿದ್ಧ  ನಯಾಗರ ಫಾಲ್ಸ್ ಅನ್ನು ಹೋಲುವ ಮಿನಿ ಜಲಪಾತವೊಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂದಾರು ಗ್ರಾಮದಲ್ಲಿರುವ ಕುಂಟಾಲಪಲ್ಕೆ ಜಲಪಾತವೇ ಈ ಮಿನಿ ನಯಾಗರ. ಉಜಿರೆಯಿಂದ ಬೆಳಾಲು–ಬೈಪಾಡಿ ರಸ್ತೆಯಲ್ಲಿ ಉಪ್ಪಿನಂಗಡಿಗೆ ಹೋಗುವ ಮಧ್ಯೆ ಕುಂಟಾಲಪಲ್ಕೆ  ಸಿಗುತ್ತದೆ. ಇಲ್ಲಿ ಹರಿಯುವ ನೇತ್ರಾವತಿಯ ಉಪನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಯ ಮೂಲಕ ಈ ರಸ್ತೆ ಸಾಗುತ್ತದೆ. ಹಾಗೇ ಸಾಗುವಾಗ ಕಾಣಸಿಗುವ ಈ ಜಲಪಾತದ ಸೊಬಗನ್ನು ಸವಿಯುವುದೇ ಒಂದು ಆನಂದ. ಇದು ಎತ್ತರದಿಂದ ಧುಮ್ಮಿಕ್ಕಿ ಹರಿಯುವುದಿಲ್ಲ, ಬದಲಾಗಿ ಅಗಲವಾಗಿ ಹರಡಿಕೊಂಡು ಸುಮಾರು ದೂರದವರೆಗೆ ಬಂಡೆಕಲ್ಲುಗಳ ಮಧ್ಯೆ ತೂರಿಕೊಂಡು ಸಾಗುತ್ತದೆ. ಅದು ಉಂಟು ಮಾಡುವ ಶಬ್ದವೂ ಕರ್ಣಾನಂದಕರ.

ಸೇತುವೆಯ ಇಕ್ಕೆಲಗಳಲ್ಲಿ ಸ್ಥಳೀಯರು ನಿರ್ಮಿಸಿದ ಮೆಟ್ಟಿಲುಗಳ ಮೂಲಕ ಕೆಳಗೆ ಇಳಿದು ಹೋಗಲು ದಾರಿಯಿದೆ. ಕೆಳಗೆ ಹೋಗಿ ಈ ಜಲಧಾರೆಯ ಸಮೀಪ ದರ್ಶನ ಮಾಡಬಹುದು. ಆದರೆ ಒಬ್ಬಂಟಿಯಾಗಿ ಹೋಗುವುದು ಅಪಾಯಕಾರಿ. ಮಳೆಗಾಲದಲ್ಲಿ ನೆಲ ಮತ್ತು ಕಲ್ಲುಗಳಿಗೆ ಪಾಚಿ ಹಿಡಿದು ಜಾರುವುದರಿಂದ ಎಚ್ಚರ ಅಗತ್ಯ. ನೀರ ಹರಿವಿನ ಮಧ್ಯದಲ್ಲಿ ಸುಳಿ ಇದ್ದು, ಅಲ್ಲಿಗೆ ಹೋಗುವುದು ಕ್ಷೇಮವಲ್ಲ.

ಈ ಪ್ರದೇಶದ ಮೂಲಕ ಇತ್ತೀಚೆಗೆ ರಸ್ತೆ ನಿರ್ಮಾಣವಾದದ್ದರಿಂದ ಈ ಜಲಪಾತವು ಹೆಚ್ಚು ಜನರಿಗೆ ಪರಿಚಿತವಾಗಿದೆ. ಅದಕ್ಕೂ ಮುನ್ನ ಇದು ಸ್ಥಳೀಯರಿಗೆ ಮಾತ್ರ ಗೊತ್ತಿದ್ದ ಜಲಪಾತ. ಇಲ್ಲಿಗೆ ಸಮೀಪದಲ್ಲಿಯೇ ಕುಂಟಾಲಪಲ್ಕೆ ಪ್ರಾಥಮಿಕ ಶಾಲೆಯೂ ಇದೆ. ಬಸ್ಸಿನ ಮೂಲಕ ಹೋಗಲು ಇಚ್ಛಿಸುವವರಿಗೆ ಉಪ್ಪಿನಂಗಡಿಯಿಂದ ಬಂದಾರು ಮಾರ್ಗವಾಗಿ ಹೋಗುವ ಖಾಸಗಿ ಬಸ್ಸುಗಳಿವೆ.

ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ಈ ನದಿಯಿಂದಾಗಿ ಇಲ್ಲಿ ಜಲಧಾರೆ ಉಂಟಾಗುತ್ತದೆ. ಮಳೆ ಬಂದರೆ ಮಣ್ಣು ಕೊಚ್ಚಿಕೊಂಡು ಬರುವ ನೀರು ಕೆಂಪಾದ ಬಣ್ಣದಿಂದ ತುಂಬಿರುತ್ತದೆ. ಮಳೆ ಕಡಿಮೆಯಾಗಿ ಬೇಸಿಗೆಯಲ್ಲಿ ನೀರು ಬರುವುದು ನಿಂತೊಡನೆ ಬರಿಯ ಕಲ್ಲು– ಬಂಡೆಗಳು ಮಾತ್ರ ಉಳಿದೊಕೊಂಡು ಶಿಲಾಪದರದ ಕೆತ್ತನೆಯಂತೆ ಕಾಣಿಸುವ ಈ ಪ್ರದೇಶ, ಎರಡು ಋತುಗಳಲ್ಲಿ ವಿಭಿನ್ನವಾದ ಸೌಂದರ್ಯದಿಂದ ಕೂಡಿದ್ದು, ಪ್ರಕೃತಿಯ ವೈಶಿಷ್ಟ್ಯಕ್ಕೆ ಸಾಕ್ಷಿಯಂತಿದೆ.

ಕರಾವಳಿಯ ಘಟ್ಟ ಸಂಧಿಸುವ ಪ್ರದೇಶಗಳಲ್ಲಿ ಮಳೆಗಾಲ ಬಂತೆಂದರೆ ಸಾಕು, ಹುಟ್ಟಿಕೊಳ್ಳುವ ಜಲಪಾತಗಳಿಗೆ ಲೆಕ್ಕವಿಲ್ಲ. ಕೆಲವೊಂದು ಪೂರ್ಣಕಾಲಿಕ ಜಲಪಾತವಾದರೆ, ಕೆಲವೊಂದು ಮಳೆಗಾಲಕ್ಕೆ ಮಾತ್ರ ಎನ್ನುವಂತಹದ್ದು. ಭೋರ್ಗರೆದು ಧುಮ್ಮಿಕ್ಕಿ ಹರಿದು ನದಿ ಸೇರಿ ಕೊನೆಗೆ ಅದೆಲ್ಲೋ ಸಮುದ್ರದ ಒಡಲನ್ನು ಸೇರುವ ಈ ಜಲಧಾರೆಗಳು, ತಾವು ಸಾಗುವ ಹಾದಿಯಲ್ಲಿ ನೋಡುಗರ ಮನಸೂರೆಗೊಳ್ಳುತ್ತವೆ.